**All India Radio: Bangalore**
**National Bulletin In Kannada**
**18.02.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**18.02.2025 1.10 p.m.**
**<><><><>**

ಮುಖ್ಯಾಂಶಗಳು

1. ಕತಾರ್ ಅಮೀರ್‌ಗೆ ರಾಷ್ಟ್ರಪತಿ ಭವನದಲ್ಲಿಂದು ಸಾಂಪ್ರದಾಯಿಕ ಸ್ವಾಗತ; ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ
2. ರಾಜಸ್ಥಾನದಲ್ಲಿ ಇಂದು ಮತ್ತು ನಾಳೆ ಎರಡನೇ ಆವೃತ್ತಿಯ ಅಖಿಲ ಭಾರತ ರಾಜ್ಯ ಜಲಸಂಪನ್ಮೂಲ ಸಚಿವರ ಸಮ್ಮೇಳನ
3. ರಷ್ಯಾ-ಉಕ್ರೇನ್ ಸಂಘರ್ಷ ಕೊನೆಗಾಣಿಸಲು ಸೌದಿ ಅರೇಬಿಯಾದಲ್ಲಿಂದು ಅಮೆರಿಕಾ-ರಷ್ಯಾ ಉನ್ನತಾಧಿಕಾರಿಗಳ ಸಭೆ
4. ಇದೇ ೨೨ ರಂದು ನಡೆಯಬೇಕಿದ್ದ ಖೇಲೊ ಇಂಡಿಯಾ ಚಳಿಗಾಲದ ಎರಡನೇ ಚರಣದ ಕ್ರೀಡಾಕೂಟ ಮುಂದೂಡಿಕೆ

<><><><>

ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ ಭಾರತಕ್ಕೆ ಭೇಟಿ ನೀಡಿರುವ ಕತಾರ್ ಅಮೀರ್, ಶೇಖ್-ತಮೀಮ್-ಬಿನ್-ಹಮದ್-ಅಲ್-ಥಾನಿ ಅವರಿಗೆ ರಾಷ್ಟ್ರಪತಿ ಭವನದ ಆವರಣದಲ್ಲಿಂದು ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಈ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಉಪಸ್ಥಿತರಿದ್ದರು. ಈ ವೇಳೆ, ಕತಾರ್‌ನ ಅಮೀರ್ ಅವರಿಗೆ ಸೇನಾ ತುಕಡಿಗಳಿಂದ ಗೌರವ ವಂದನೆ ಸಲ್ಲಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಂಪ್ರದಾಯಿಕ ಔತಣಕೂಟ ಆಯೋಜನೆ ಮಾಡಿರುವುದರಿಂದ ಕತಾರ್ ನ ಅಮೀರ್ ರಾಷ್ಟ್ರಪತಿ ಭವನಕ್ಕೆ ಆಗಮಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕತಾರ್ ಅಮೀರ್ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತ ನಿಯೋಗ ಮಟ್ಟದ ಮಾತುಕತೆ ಪ್ರಗತಿಯಲ್ಲಿದೆ. ವ್ಯಾಪಾರ, ಹೂಡಿಕೆ, ಶಕ್ತಿ ಮತ್ತು ತಂತ್ರಜ್ಞಾನದ ಸಹಯೋಗವು ಪ್ರಮುಖ ಕಾರ್ಯಸೂಚಿಯಾಗಿದೆ. ಭಾರತ ಮತ್ತು ಕತಾರ್ ಬಲವಾದ ಆರ್ಥಿಕ ಪಾಲುದಾರಿಕೆಯನ್ನು ಹಂಚಿಕೊಳ್ಳಲಿದ್ದು, ದ್ವಿಪಕ್ಷೀಯ ವ್ಯಾಪಾರವು ವಿವಿಧ ಕ್ಷೇತ್ರಗಳಲ್ಲಿ ವಿಸ್ತರಿಸುವ ಕುರಿತು ಚರ್ಚೆ ನಡೆಸಲಾಗುತ್ತದೆ.

<><><><>

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮತ್ತು ಅವರ ಕತಾರ್ ಸಹವರ್ತಿ ಶೇಖ್ ಫೈಸಲ್ ಬಿನ್ ಥಾನಿ ಬಿನ್ ಫೈಸಲ್ ಅಲ್ ಥಾನಿ, ಭಾರತೀಯ ಕೈಗಾರಿಕಾ ಒಕ್ಕೂಟ - ಸಿಐಐ ಆಯೋಜಿಸಿದ್ದ ಭಾರತ-ಕತಾರ್ ಜಂಟಿ ವ್ಯಾಪಾರ ವೇದಿಕೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಭಾರತ ಮತ್ತು ಕತಾರ್ ನಡುವೆ ಎರಡು ತಿಳುವಳಿಕೆ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಪಿಯೂಷ್ ಗೋಯಲ್, ಭಾರತ ಮತ್ತು ಕತಾರ್ ನಡುವೆ ಐತಿಹಾಸಿಕ ಸಂಬಂಧಗಳಿದ್ದು, ಹೊಸ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಜಾಗತಿಕ ಪ್ರಗತಿಗೆ ಅನುಗುಣವಾಗಿ ಎರಡೂ ದೇಶಗಳು ತಮ್ಮ ಸಂಬಂಧಗಳನ್ನು ಬಲಪಡಿಸಲು ಬದ್ಧವಾಗಿವೆ ಎಂದು ಹೇಳಿದರು.

ಧ್ವನಿ: ಪಿಯೂಶ್ ಗೋಯಲ್ ೧೮ ಸೆಕೆಂಡ್

<><><><>

ರಾಜಸ್ಥಾನದ ಉದಯಪುರದಲ್ಲಿ ಇಂದು ಮತ್ತು ನಾಳೆ ಅಖಿಲ ಭಾರತ ರಾಜ್ಯ ಜಲ ಸಂಪನ್ಮೂಲ ಸಚಿವರ ಸಮ್ಮೇಳನದ ೨ ನೇ ಆವೃತ್ತಿ ನಡೆಯಲಿದೆ. ಸಭೆಯಲ್ಲಿ, ತಮಿಳುನಾಡು, ಆಂಧ್ರ ಪ್ರದೇಶ ಸೇರಿದಂತೆ ದೇಶದ ಎಲ್ಲಾ ನೀರಾವರಿ ಸಚಿವರು ಪಾಲ್ಗೊಂಡಿದ್ದಾರೆ. ಇಂಡಿಯಾ @ ೨೦೪೭ ಜಲ ಸುರಕ್ಷಿತ ರಾಷ್ಟ್ರ ಈ ಬಾರಿಯ ನೀರಾವರಿ ಸಚಿವ ಸಮ್ಮೇಳನದ ಧ್ಯೇಯ ವಾಕ್ಯವಾಗಿದೆ. ಸಮ್ಮೇಳನವು ಭಾರತದ ಜಲ ಭದ್ರತೆಯ ಭವಿಷ್ಯವನ್ನು ರೂಪಿಸುವಲ್ಲಿ

ಮಹತ್ವದ ಮೈಲಿಗಲ್ಲು ಆಗಲಿದೆ.  ನೀರಿನ ಭದ್ರತೆ, ನೀರಿನ ಬಳಕೆಯ ದಕ್ಷತೆ, ಆಡಳಿತ, ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ನೀರಿನ ಗುಣಮಟ್ಟ ಕುರಿತಂತೆ ಚರ್ಚೆ ನಡೆಯಲಿದೆ.  ಕರ್ನಾಟಕದಿಂದ ಉಪಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ತೆರಳಿದ್ದಾರೆ. ಇದಕ್ಕೂ ಬೆಂಗಳೂರಿನಲ್ಲಿ ನಗರದಲ್ಲಿ ಮಾತನಾಡಿದ ಅವರು, ಮೇಕೆದಾಟು, ಮಹದಾಯಿ, ನವಲಿ ಹಾಗೂ ಅಣೆಕಟ್ಟು ದುರಸ್ತಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

<><><>

ರಷ್ಯಾ-ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸುವ ಬಗ್ಗೆ ಚರ್ಚಿಸಲು ಅಮೆರಿಕಾ ಹಾಗೂ ರಷ್ಯಾದ ಉನ್ನತಾಧಿಕಾರಿಗಳು ಇಂದು ಸೌದಿ ಅರೇಬಿಯಾಗೆ ರಿಯಾದ್‌ನಲ್ಲಿ ಸಭೆ ಸೇರಲಿದ್ದಾರೆ.  ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲವರೊ ಮತ್ತು ವಿದೇಶಾಂಗ ವ್ಯವಹಾರಗಳ ಸಲಹೆಗಾರ ಯೂರಿ ಉಷಾಕೋವ್ ನಿನ್ನೆ ಸೌದಿ ಅರೇಬಿಯಾಗೆ ಆಗಮಿಸಿದರು. ಮತ್ತೊಂದೆಡೆ ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕ್ ವಾಲ್ಟ್ಸ್ ಮತ್ತು ವಿಶೇಷ ರಾಯಭಾರಿ ಸ್ಟೀವ್ ವಿಟ್‌ಕಾಫ್ ಇಂದು ರಷ್ಯಾ ನಿಯೋಗವನ್ನು ಭೇಟಿಯಾಗಲಿದ್ದಾರೆ ಎಂದು ಅಮೆರಿಕಾ ವಿದೇಶಾಂಗ ಇಲಾಖೆಯ ವಕ್ತಾರ ಟ್ಯಾಮಿ ಬ್ರೂಸ್ ತಿಳಿಸಿದ್ದಾರೆ.

<><><>

ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಸಿದ್ಧತೆ, ಒತ್ತಡ ನಿರ್ವಹಣೆ ಮತ್ತು ವೈಯಕ್ತಿಕ ಬೆಳವಣಿಗೆ ಕುರಿತಂತೆ ಅರಿವು ಮೂಡಿಸಲು ಪ್ರಧಾನಿ ನರೇಂದ್ರ ಮೋದಿ ನಡೆಸಿಕೊಡುವ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮ ಈ ಬಾರಿ ೮ ಸಂಚಿಕೆಗಳಲ್ಲಿ ಮೂಡಿ ಬಂತು. ಪ್ರತಿ ಸಂಚಿಕೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಇಂದಿನ ೮ನೇ ಸಂಚಿಕೆಯಲ್ಲಿ, ವಿವಿಧ ಬೋರ್ಡ್‌ಗಳು ಮತ್ತು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳಿಸಿದ ಸಾಧಕರು ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಒತ್ತಡ, ಆತಂಕ ಮತ್ತು ಒತ್ತಡದ ಸಂದರ್ಭಗಳಲ್ಲಿ ಶಾಂತವಾಗಿರುವುದರ ಕುರಿತು ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು ಹಂಚಿಕೊಂಡರು.

<><><>

ಕರ್ನಾಟಕದ ಕಾರವಾರದಲ್ಲಿರುವ ನೌಕಾ ನೆಲೆಯ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನಕ್ಕೆ ನೀಡಿದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆ-ಎನ್‌ಐಎ ಕಾರವಾರದ ಇಬ್ಬರನ್ನು ಬಂಧಿಸಿದೆ.  ಹೈದರಾಬಾದ್‌ನಿಂದ ಬಂದ ಎನ್‌ಐಎ ತಂಡ ಆರೋಪಿಗಳನ್ನು ವಶಕ್ಕೆ ತೆಗೆದುಕೊಂಡಿದೆ. ೨೦೨೪ರ ಆಗಸ್ಟ್‌ನಲ್ಲಿ ಮೂವರು ಆರೋಪಿಗಳನ್ನು ಎನ್‌ಐಎ ಮಾಹಿತಿ ಸೋರಿಕೆ ಕುರಿತು ಪ್ರಶ್ನಿಸಿತ್ತು. ಆ ವೇಳೆ ಅವರನ್ನು ಬಿಡುಗಡೆಗೊಳಿಸಲಾಗಿತ್ತಾದರೂ, ಅವರ ಚಲನವಲನದ ಮೇಲೆ ಸಂಸ್ಥೆ ನಿಗಾ ಇಟ್ಟಿತ್ತು. ಪಾಕಿಸ್ತಾನದ ಏಜೆನ್ಸಿಗಳು ಹನಿ ಟ್ರ್ಯಾಪ್ ಮೂಲಕ ಆರೋಪಿಗಳಿಂದ ಮಾಹಿತಿ ಕಲೆ ಹಾಕುತ್ತಿದ್ದರು ಎನ್ನಲಾಗಿದೆ.

<><><>

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಇಂದಿಗೆ ೯ ವರ್ಷ ಪೂರೈಸಿದೆ. ಬೆಳೆ ಹಾನಿ ಹಾಗೂ ನೈಸರ್ಗಿಕ ವಿಪತ್ತುಗಳಿಂದ ತೊಂದರೆ ಅನುಭವಿಸಿದ ರೈತರಿಗೆ ಆರ್ಥಿಕ ನೆರವು ನೀಡುವ ಗುರಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ೨೦೧೬ರಲ್ಲಿ ಈ ಯೋಜನೆಗೆ ಚಾಲನೆ ನೀಡಿದರು.  ನವೀನ ಕೃಷಿ ವಿಧಾನಗಳನ್ನು ಅಳವಡಿಕೆಗೆ ಉತ್ತೇಜನ ನೀಡುವುದರ ಜೊತೆಗೆ ರೈತರ ಆದಾಯವನ್ನು ಹೆಚ್ಚಿಸುವಲ್ಲಿ ಈ ಯೋಜನೆ ಪ್ರಮುಖ ಪಾತ್ರ ವಹಿಸಿದೆ. ಈ ಯೋಜನೆಯ ಯಶಸ್ಸು ಹಾಗೂ ಸಾಮರ್ಥ್ಯವನ್ನು ಮನಗಂಡ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಈ ಯೋಜನೆಯನ್ನು ೬೯ ಸಾವಿರದ ೫೧೫ ಕೋಟಿಗೂ ಅಧಿಕ ಆಯವ್ಯಯ ಮೌಲ್ಯದೊಂದಿಗೆ ಮುಂದುವರೆಸಲು ನಿರ್ಧರಿಸಲಾಗಿದೆ.

<><><>

ಭುವನೇಶ್ವರದ ಖಾಸಗಿ ವಿಶ್ವವಿದ್ಯಾಲಯವೊಂದರಲ್ಲಿ ನೇಪಾಳದ ವಿದ್ಯಾರ್ಥಿನಿಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಡಿಶಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಸಂಬಂಧ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬರನ್ನು ಬಂಧಿಸಿದ್ದಾರೆ. ನೇಪಾಳದ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಅವರು ಘಟನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ, ಪರಿಸ್ಥಿತಿಯನ್ನು ಪರಿಹರಿಸಲು ತಮ್ಮ ಸರ್ಕಾರ ರಾಜತಾಂತ್ರಿಕ ಮಾರ್ಗಗಳ ಮೂಲಕ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಒಡಿಶಾದಲ್ಲಿ ನಡೆದ ಘಟನೆಯಿಂದ ಪ್ರಭಾವಿತರಾದ ನೇಪಾಳದ ವಿದ್ಯಾರ್ಥಿಗಳಿಗೆ ಸಲಹೆ ನೀಡಲು ನವದೆಹಲಿಯಲ್ಲಿರುವ ನೇಪಾಳ ರಾಯಭಾರ ಕಚೇರಿ

ಇಬ್ಬರು ಅಧಿಕಾರಿಗಳನ್ನು ಕಳುಹಿಸಿದೆ ಎಂದು ಅವರು ಹೇಳಿದ್ದಾರೆ. ಏತನ್ಮಧ್ಯೆ, ನೇಪಾಳ ರಾಯಭಾರ ಕಚೇರಿಯು ಭಾರತ ಸರ್ಕಾರ ಮತ್ತು ಭುವನೇಶ್ವರದಲ್ಲಿರುವ ಒಡಿಶಾ ಮುಖ್ಯಮಂತ್ರಿ ಕಚೇರಿಯೊಂದಿಗೆ ಸಂಪರ್ಕದಲ್ಲಿದೆ, ಈ ವಿಷಯದ ಬಗ್ಗೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ. ನೇಪಾಳದ ವಿದ್ಯಾರ್ಥಿಗಳು ತಮ್ಮ ಆದ್ಯತೆಗಳಿಗೆ ಅನುಗುಣವಾಗಿ ತಮ್ಮ ಹಾಸ್ಟೆಲ್‌ಗಳಲ್ಲಿ ಉಳಿಯಲು ಅಥವಾ ಮನೆ ಮರಳಲು ವ್ಯವಸ್ಥೆ ಮಾಡಲಾಗುತ್ತಿದೆ.

<><><><>

ಭಾರತದ ನಾಲ್ಕನೇ ತಲೆಮಾರಿನ ಡೀಪ್-ಓಷನ್ ಸಬ್‌ಮರ್ಸಿಬಲ್ 'ಮತ್ಸ್ಯ-೬೦೦೦' ಬಂದರಿನಲ್ಲಿ ತೇವ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ೨೦೨೫ ರ ಅಂತ್ಯದ ವೇಳೆಗೆ ೫೦೦ ಮೀಟರ್ ಆಳದಲ್ಲಿ ಆಳವಿಲ್ಲದ ನೀರಿನ ಪ್ರದರ್ಶನಗಳನ್ನು ನಡೆಸಲು ದಾರಿ ಮಾಡಿಕೊಟ್ಟಿದೆ. ತೇವ ಪರೀಕ್ಷೆಗಳನ್ನು ನಡೆಸಲು ಮತ್ತು ಸಬ್‌ಮರ್ಸಿಬಲ್ ಕಾರ್ಯವನ್ನು ಪ್ರದರ್ಶಿಸಲು ಚೆನ್ನೈ ಸಮೀಪದ ಕಟ್ಟುಪಲ್ಲಿ ಬಂದರಿನಲ್ಲಿರುವ ಹಡಗು ನಿರ್ಮಾಣ ಸೌಲಭ್ಯಕ್ಕೆ ಸಾಗಿಸಲಾಯಿತು. ಸರ್ಕಾರದ ಡೀಪ್ ಓಷನ್ ಮಿಷನ್ ಉಪಕ್ರಮಗಳ ಅಡಿಯಲ್ಲಿ, ಭೂ ವಿಜ್ಞಾನ ಸಚಿವಾಲಯವು ಸಮುದ್ರಯಾನ್ ಯೋಜನೆಯ ಭಾಗವಾಗಿ ಮತ್ಸ್ಯ-೬೦೦೦ ವಿನ್ಯಾಸ ಮತ್ತು ಅಭಿವೃದ್ಧಿಯನ್ನು ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆಗೆ ವಹಿಸಿದೆ. ಭಾರತದ ಸಾಗರ ಪರಿಶೋಧನಾ ಸಾಮರ್ಥ್ಯಗಳಲ್ಲಿ ಮಹತ್ವದ ಮೈಲಿಗಲ್ಲನ್ನು ಇದು ಗುರುತಿಸುತ್ತದೆ.

<><><><>

ರಾಮಕೃಷ್ಣ ಪರಮಹಂಸರು ಭಾರತದ ಪ್ರಸಿದ್ಧ ಧಾರ್ಮಿಕ ನೇತೃಗಳಲ್ಲಿ ಒಬ್ಬರು. ಪರಮಹಂಸರು ಅದ್ವೈತ ವೇದಾಂತ ಸಿದ್ಧಾಂತವನ್ನು ಬೋಧಿಸಿದರಲ್ಲದೆ, ಎಲ್ಲ ಧರ್ಮಗಳೂ ಒಂದೇ ಗುರಿಯತ್ತ ನಮ್ಮನ್ನು ಒಯ್ಯುತ್ತವೆ ಎಂದು ನಂಬಿದ್ದರು. ೧೯ ನೆಯ ಶತಮಾನದ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ದಾರಿ ಮಾಡಿಕೊಟ್ಟ ವ್ಯಕ್ತಿಗಳಲ್ಲಿ ಪರಮಹಂಸರೂ ಒಬ್ಬರು. ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ರಾಮಕೃಷ್ಣ ಮಿಷನ್ ಇವರ ಗೌರವಾರ್ಥವಾಗಿಯೇ ಇರುವುದು. ದೇಶ ಕಂಡ ಶ್ರೇಷ್ಠ ಸಂತರು, ಆಧ್ಯಾತ್ಮಿಕ ಗುರುಗಳು ಹಾಗೂ ಸರ್ವಧರ್ಮ ಸಮನ್ವಯದ ಹರಿಕಾರರಾಗಿದ್ದ ರಾಮಕೃಷ್ಣ ಪರಮಹಂಸರ ಜನ್ಮ ದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ರಾಮಕೃಷ್ಣರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ರಾಮಕೃಷ್ಣರು ಕಾಳಿಯ ಸಾಕ್ಷ್ಯಾತ್ಕಾರಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ಮಹಾನ್ ಸಂತರಾಗಿದ್ದರು ಎಂದು ಬಣ್ಣಿಸಿದ್ದಾರೆ.

<><><><>

ಪಂಜಾಬ್‌ನ ಫರೀದ್‌ಕೋಟ್ ಜಿಲ್ಲೆಯಲ್ಲಿ ಇಂದು ಬೆಳಿಗ್ಗೆ ಖಾಸಗಿ ಬಸ್ ಚರಂಡಿಗೆ ಉರುಳಿ ಬಿದ್ದ ಪರಿಣಾಮ ಕನಿಷ್ಠ ೫ ಮಂದಿ ಸಾವನ್ನಪ್ಪಿದ್ದು, ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಕೊಟ್ಕಪುರ-ಫರೀದ್‌ಕೋಟ್ ರಸ್ತೆಯಲ್ಲಿ ಎದುರಿನಿಂದ ಬರುತ್ತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಪ್ರಯತ್ನಿಸುವಾಗ ಬಸ್ ರಸ್ತೆಯಿಂದ ಜಾರಿ ಚರಂಡಿಗೆ ಉರುಳಿದೆ.

<><><><>

ಹಿಮದ ಕೊರತೆಯ ನಡುವೆ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟ ೨೦೨೫ರ ಎರಡನೇ ಹಾಗೂ ಅಂತಿಮ ಚರಣವನ್ನು ಮುಂದೂಡಲಾಗಿದೆ. ಇದೇ ೨೨ ರಂದು ಗುಲ್‌ಮಾರ್ಗ್, ಜಮ್ಮು-ಕಾಶ್ಮೀರದಲ್ಲಿ ಆರಂಭವಾಗಬೇಕಿದ್ದ ಎರಡನೇ ಚರಣದಲ್ಲಿ ಆಲ್‌ಪೈನ್ ಸ್ಕೀಯಿಂಗ್, ನಾರ್ಡಿಕ್ ಸ್ಕೀಯಿಂಗ್, ಸ್ನೊಬೋಡಿಂಗ್ ಹಾಗೂ ಸ್ಕೀಮೌಂಟೆನೇರಿಂಗ್ ಸ್ಪರ್ಧೆಗಳು ನಡೆಯಬೇಕಿದ್ದವು. ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>